ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತಮೂರನೆಯ ಅಧಿವೇಶನ
ಬುಧವಾರ, ದಿನಾಂಕ : 03 ನೇ ಫೆಬ್ರುವರಿ, 2021

ಮೇವು ಖರೀದಿಯಲ್ಲಿ ಅಕ್ರಮವಾಗಿರುವ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)

323 (315) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬರ ನಿರ್ವಹಣೆಗಾಗಿ ಬಿಡುಗಡೆ ಮಾಡಲಾದ ಅನುದಾನದಿಂದ ಗೋಶಾಲೆಗಳಿಗೆ ಮೇವು ಖರೀದಿಯಲ್ಲಿ ಅಕ್ರಮವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

(ಆ) ಚಾಮರಾಜನಗರ ಕೊಳ್ಳೆಗಾಲದ ತಹಶೀಲ್ದಾರರವರು 2017-18ನೇ ಸಾಲಿನಲ್ಲಿ ಪ್ರತಿ ಟನ್ ರೂ.1,500 ಪಾವತಿ ಮಾಡುವ ಬದಲು ರೂ.6000 ಪಾವತಿ ಮಾಡಿ ಮೇವು ಖರೀದಿಸಿ ಭ್ರಷ್ಟಾಚಾರ ಎಸಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಈ ಕುರಿತು ಸರಕಾರ ಯಾವ ಕ್ರಮ ಕೈಗೊಂಡಿದೆ;

(ಇ) ಕಳೆದ 5 ವರ್ಷಗಳಲ್ಲಿ ಮೇವು ಖರೀದಿಸಲು ಸರಕಾರ ಎಷ್ಟು ಮೊತ್ತವನ್ನು ಬಿಡುಗಡೆ ಮಾಡಿದೆ ? (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಮೇವು ಖರೀದಿಸಲು ಸರಕಾರ ಟನ್ ಒಂದಕ್ಕೆ ನಿಗದಿ ಪಡಿಸಿದ ಮೊತ್ತವೆಷ್ಟು; ಎಷ್ಟು ಟನ್ ಮೇವನ್ನು ಖರೀದಿಸಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)